ಅ.ದಾ. ನಂ.279/2014 ಪಿ.ಡಬ್ಲ್ಯೂ-1

ದಿನಾಂಕಃ04.06.2024 ರಂದು ಪಿ.ಡಬ್ಲ್ಯೂ-1 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ವಾದಿಯಿಂದಃ

14. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದರಲ್ಲಿ ನನ್ನ ಸಹಿ ಇದೆ ಎಂದರೆ ಸರಿ. ಸದರಿ ದಾಖಲಾತಿಯನ್ನು ಸಾಕ್ಷಿ ಗುರುತಿಸಿದ ಕಾರಣ ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ನಿಡಿ 1, ಒಎಸ್ ನಂಬರ್ 259/2017 ರ ವಾದ ಪ್ರತಿ ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿ ಒಎಸ್ ನಂಬರ್ 259/2017 ರ ಆದೇಶ ಪುಟಗಳು ಎಂದರೆ ಸರಿ. ಅದನ್ನು ನಿಡಿ 2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿ ಒಎಸ್ ನಂಬರ್ 259/2017 ರ ಸಾಕ್ಷ್ಯಗಳು ಎಂದರೆ ಸರಿ. ಅದನ್ನು ನಿಡಿ 3 ಎಂದು ಗುರುತಿಸಲಾಯಿತು. ಒಎಸ್ ನಂಬರ್.259/2017 ರಲ್ಲಿ ದಿಃ

10.07.2000 ರ ಕ್ರಯಪತ್ರದ ಮೂಲ ಪ್ರತಿಯನ್ನು ಹಾಜರುಪಡಿಸಿದ್ದೆ ಎಂದರೆ ಸರಿ ಸದರಿ ಕ್ರಯಪತ್ರ ಈಗ ಎಲ್ಲಿರುತ್ತದೆ ಎಂದರೆ ನ್ಯಾಯಾಲಯದಲ್ಲೇ ಇರುತ್ತದೆ. ನಿಪಿ 1 ದೃಡೀಕೃತ ನಕಲಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಬ್ಯಾಂಕಿನಿಂದ ಸಾಲ ಪಡೆದುಕೊಳ್ಳಲು ಕ್ರಯಪತ್ರವನ್ನು ಬ್ಯಾಂಕಿನವರಿಗೆ ನೀಡಿರುತ್ತೇನೆ. ಅದನ್ನು ಬ್ಯಾಂಕಿನಿಂದ ನ್ಯಾಯಾಲಯವು ತರಿಸಿಕೊಂಡಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರದ ಆಧಾರದ ಮೇಲೆ ಯಾವಾಗ ಬ್ಯಾಂಕಿನಿಂದ ಸಾಲ ಪಡೆದುಕೊಂಡಿರುತ್ತೀರಾ ಎಂದರೆ ನೆನಪಿರುವುದಿಲ್ಲ.

15. ನಿಪಿ 1 ರ 3 ನೇ ಪುಟದಲ್ಲಿ ನಮೂದಾಗಿರುವ ದಿಃ 02.05.1986 ರ ಕ್ರಯಪತ್ರ ಎಲ್ಲಿರುತ್ತದೆ ಎಂದರೆ ಮೂಲ ಮಾಲೀಕರ ಬಳಿ ಇರುತ್ತದೆ ದಿಃ 30.10.1998 ರಲ್ಲಿ ಇಬ ಎಂದು ನಮೂದಾಗಿದ್ದು, ಸದರಿ ಇಬ ಕ್ಕೆ ಸಂಬಂಧಪಟ್ಟ ಪತ್ರ ಎಲ್ಲಿರುತ್ತದೆ ಎಂದರೆ ಮೂಲ ಮಾಲೀಕರ ಬಳಿ. ಸದರಿ ದಾಖಲಾತಿಯ ಬಗ್ಗೆ ವಿಚಾರಿಸಿದ್ದೀರಾ ಎಂದರೆ ವಿಚಾರಿಸಿರುತ್ತೇವೆ. ಸದರಿ ದಾಖಲಾತಿಗಳ ದೃಡೀಕೃತ ನಕಲುಗಳನ್ನು ಪಡೆದುಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸರಿ. ನಿಪಿ 1 ರ 3 ನೇ ಪುಟದಲ್ಲಿ ದಿಃ 30.10.1998 ರಿಂದ ನನಗೆ ಕ್ರಯಪತ್ರ ಆಗುವವರೆಗೂ ಮೂಲ ಮಾಲೀಕರ ಬಳಿ ದಾವಾಸ್ವತ್ತಿನ ಸ್ವಾದೀನ ಇರಲಿಲ್ಲ ಎಂದರೆ ಸರಿಯಲ್ಲ. ಹಾಗಾದರೆ ನಿಪಿ 1 ಆಗುವ ಪೂರ್ವದಲ್ಲಿ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಅದನ್ನು ಮೂಲ ಮಾಲೀಕರು ಇರುವ ಬಗ್ಗೆ ನಿಪಿ 1 ರಲ್ಲಿ ನಮೂದಾಗಿರುವುದು ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. ನಾನು ನಿಪಿ 1 ರ ಪೂರ್ವದಲ್ಲೂ ಸಹ ನಾನೇ ಸ್ವಾಧೀನದಲ್ಲಿದ್ದೆ, ನಂತರದಲ್ಲಿ ನಾನೇ ಇದ್ದೆ. ನಿಪಿ 1 ರಲ್ಲಿ ನಾನೇ ಸ್ವಾಧೀನದಲ್ಲಿ ಇದ್ದೆ ಎಂದು ಬರೆಸಲು ತೊಂದರೆ ಇತ್ತಾ ಎಂದರೆ ಗೊತ್ತಿಲ್ಲ. ನಿಪಿ 1 ಅನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದರೆ ಎಂ. ಅಹಮದ್ ಪಾಷ.

16. ದಾವಾ ಸ್ವತ್ತಿನ ದಿಃ 02.05.1986 ರ ಪೂರ್ವ ಮಾಲೀಕರು ಯಾರು ಎಂದರೆ ಗೊತ್ತಿಲ್ಲ. ಒಎಸ್ ನಂಬರ್ 259/2007 ರಲ್ಲಿ ನನ್ನ ವಿಚಾರಣೆ ಆದ ನಂತರ ದಿಃ 02.05.1986 ಕ್ಕಿಂತ ಮೊದಲು ಮೂಲ ಮಾಲೀಕರ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸಿದ್ದೀರಾ ಎಂದರೆ ಇಲ್ಲ. ಸದರಿ ದಿನಾಂಕದ ಪೂರ್ವದಲ್ಲಿ ಎಷ್ಟು ಒಟ್ಟು ವಿಸ್ತೀರ್ಣ ಇತ್ತು ಎಂದರೆ ಗೊತ್ತಿಲ್ಲ. ಸದರಿ ದಿನಾಂಕದ ಪೂರ್ವದಲ್ಲಿ ಕಟ್ಟಡ ಇತ್ತಾ ಎಂದರೆ ಗೊತ್ತಿಲ್ಲ. ಸದರಿ ದಿನಾಂಕದ ಪೂರ್ವದಲ್ಲಿ ಸದರಿ ಸ್ವತ್ತಿನ ಚೆಕ್ಕು ಬಂದಿ ಗೊತ್ತಾ ಎಂದರೆ ಗೊತ್ತಿಲ್ಲ. ಸದರಿ ದಿನಾಂಕದ ಪೂರ್ವದಲ್ಲಿ ಖಾತೆ ನಂಬರ್ ಏನಾಗಿತ್ತು ಎಂದರೆ ಗೊತ್ತಿಲ್ಲ.

17. ಮೇಲೆ ತಿಳಿಸಿದ ಇಬ ಮತ್ತು ಕ್ರಯ ಪತ್ರಗಳನ್ನು ಮೂಲ ಮಾಲೀಕರಿಂದ ಪಡೆದು ಹಾಜರುಪಡಿಸಲು ತೊಂದರೆ ಇದೆಯೇ ಎಂದರೆ ಹಾಜರುಪಡಿಸಲು ಆಗುವುದಿಲ್ಲ, ಸದರಿ ಇಬ ದಲ್ಲಿ ಖಾತೆ ನಂಬರ್ ಮತ್ತು ವಿಸ್ತೀರ್ಣ ಏನೆಂದು ನಮೂದಾಗಿದೆ ಎಂದರೆ ಗೊತ್ತಿಲ್ಲ. ಯಾವ ದಿಕ್ಕಿಗೆ ಇರುವ ಸ್ವತ್ತನ್ನು ಖರೀದಿಸಿರುತ್ತಾರೆ ಎಂದರೆ ಪೂರ್ವದ ದಿಕ್ಕಿಗೆ ಸದರಿ ಇಬ ಕ್ಕೆ ಯಾರು ಸಾಕ್ಷಿಯಾಗಿರುತ್ತಾರೆ ಮತ್ತು ಯಾರು ಬರೆದಿರುತ್ತಾರೆ ಎಂದರೆ ಗೊತ್ತಿಲ್ಲ. ರಫೀಖ್ ಆಗಲಿ ಅವರ ತಮ್ಮನಿಗಾಗಲಿ ದಾವಾ ಸ್ವತ್ತಿನ ಬಗ್ಗೆ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಮೂಲ ದಾಖಲೆಗಳ ಬಗ್ಗೆ ನನಗೆ ಈಗಲೂ ಮಾಹಿತಿ ಇರುವುದಿಲ್ಲ ಎಂದರೆ ಗೊತ್ತಿಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಸಹಿ/-
(ಶ್ರೀಮತಿ ಸ್ನೇಹಾ ಎಂ.)
ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮುಳಬಾಗಿಲು